**PW_5**

## <u>1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ</u>

## <u>ಸಿ.ಸಿ.2350/2021</u>

| | | |
|---|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಸಲೀಮ್ | PW:5 |
| ತಂದೆಯ ಹೆಸರು | ಮಹಮದ್ ನೂರುಲ್ಲಾ | CW:14 |
| ವಯಸ್ಸು | 35 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಖಾಸಗಿ ಕೆಲಸ | ದಿನಾಂಕ : 09/08/2024 |
| ವಾಸ | ಮಿಲತ್ ಸ್ಕೂಲ್ ಹಿಂಬಾಗ, ಚಿತ್ರದುರ್ಗ | |

### <u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ</u>

ನಾನು ಡಿಗ್ರಿ ಮುಗಿಸಿರುತ್ತೇನೆ. ಸಾಕ್ಷಿಗೆ ಎರಡು ದಾಖಲೆಯಲ್ಲಿರುವ ಸಹಿಯನ್ನು ತೋರಿಸಲಾಗಿ ಸದರಿ ಸಹಿಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಸದರಿ ದಾಖಲೆಗಳನ್ನು ನಿಪಿ.114 ಮತ್ತು 115 ಎಂದು , ಸಾಕ್ಷಿಯ ಸಹಿಯನ್ನು ನಿಪಿ.114(ಎ) , 115(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2012 ನೇ ಇಸವಿಯಲ್ಲಿ ನಾನು ನಗರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಹಿ ಮಾಡುವ ಕಾಲಕ್ಕೆ ಯಾವ ವಿಷಯ ಅಂತ ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿಯನ್ನು ತೋರಿಸಿ ಆರೋಪಿಯ ಮನೆಯ ಬಳಿ ನನ್ನ ಹಾಗೂ ಚಾಸಾ 15 ರವರ ಸಮಕ್ಷಮದಲ್ಲಿ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಅದು ಯಾವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರು ಹೇಳಿದರು ಅಂತ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನ್ಯಾಯಾಲಯದಲ್ಲಿ ಇರುವ 7 ನೇ

**PW_5**

ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತಿದ್ದೇನೆ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು.**

**ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ**

ದಿ: 01.03.2012 ರಂದು ಚಿತ್ರದುರ್ಗ ನಗರದ ನೆಹರು ನಗರ 3 ನೇ ಕ್ರಾಸ್ ನಲ್ಲಿ ಇರುವ ಮಿಲತ್ ಸ್ಕೂಲ್ ಹಿಂಬಾಗದಲ್ಲಿ ಇರುವ 7 ನೇ ಆರೋಪಿಯ ವಾಸದ ಮನೆಯ 1 ನೇ ಮಹಡಿಯ ರೂಮ್ ಒಳಗಡೆ ನನ್ನ ಹಾಗೂ ಚಾಸಾ.15 ರವರ ಸಮಕ್ಷಮದಲ್ಲಿ ಗಾಡ್ರೆಜ್ ಬೀರುವನ್ನು ಶೋದನೆ ಮಾಡಲಾಗಿ ಯಾವುದೇ ನಗದು ಹಣ ಬೆಲೆ ಬಾಳುವ ಒಡವೆಗಳು ಹಾಗೂ ದಾಖಲಾತಿಗಳು ದೊರೆತಿರುವುದಿಲ್ಲ. ಶೋದನೆ ಕಾಲಕ್ಕೆ ಆರೋಪಿಯ ಅಣ್ಣ ಹಾಜರಿದ್ದರು ಎಂದರೆ ಸರಿಯಲ್ಲ. ನಿಪಿ.114, 115 ರ ಕಾಲಕ್ಕೆ ನಾನು ಖುದ್ದು ಹಾಜರಿದ್ದು ಆರೋಪಿಯನ್ನು ಗುರುತಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಆರೋಪಿಯು ನನಗೆ ಸಂಬಂದಿಕನೆಂದರೆ ಸರಿಯಲ್ಲ. ಮಹಜರ ಕಾಲಕ್ಕೆ ಹಾಜರಿದ್ದು ಸಹಿ ಮಾಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**